**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 520/2024**

**ಪ್ರಾಸಾಃ- 6 ಚಾಸಾಃ- 18**

| | | |
|---|---|---|
| ಸಾಕ್ಷಿಯ ಹೆಸರು | : | ಕಾರ್ತಿಕ್ |
| ತಂದೆಯ ಹೆಸರು | : | ಲಕ್ಷ್ಮಿ ನಾರಾಯಣ |
| ವಯಸ್ಸು | : | 23 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಶ್ರೀರಾಮರಂಗಾಪುರ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 5.2.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 1 ಮತ್ತು 4 ನನ್ನ ತಂದೆ ತಾಯಿ. ಚಾಸಾ 11 ನನ್ನ ಅಣ್ಣ. ನನಗೆ ಚಾಸಾ 9 ರಿಂದ 17 ರವರ ಪರಿಚಯ ಇದೆ. ನಾವು ಮಾದಿಗ ಜನಾಂಗಕ್ಕೆ ಸೇರಿದ್ದೇವೆ. ನನಗೆ ಆರೋಪಿ 1 ಮತ್ತು 2 ರವರ ಪರಿಚಯ ಇದೆ. ಮೃತ ರಾಜೇಶ್ವರಿ ನನಗೆ ಅಕ್ಕನಾಗಬೇಕು.

ರಾಜೇಶ್ವರಿ 1 ನೇ ಆರೋಪಿಯನ್ನು ಪ್ರೀತಿಸಿ 4 ವರ್ಷದ ಹಿಂದೆ ಮದುವೆಯಾಗಿದ್ದಳು. ಅವರ ಮದುವೆ ಕಂಪ್ಲಿ ನೊಂದಣಿ ಕಚೇರಿಯಲ್ಲಿ ನೊಂದಣಿ ಆಗಿತ್ತು. ನಾವು ಸದರಿ ಮದುವೆಗೆ ಒಪ್ಪಿಗೆ ಕೊಟ್ಟಿದ್ದೆವು. ನನ್ನ ಅಕ್ಕ ಮದುವೆಯಾದ ನಂತರ 1 ನೇ ಆರೋಪಿಯ ಜೊತೆ ನಮ್ಮ ಓಣಿಯಲ್ಲಿ ಬೇರೆ ಮನೆಯಲ್ಲಿ ವಾಸ ಇದ್ದಳು. ಅವಳು 1 ವರ್ಷದತನಕ ಸದರಿ ಮನೆಯಲ್ಲಿ ವಾಸ ಇದ್ದಳು. ನಂತರ 1 ನೇ ಆರೋಪಿ ಮತ್ತು ನನ್ನ ಅಕ್ಕ 2 ನೇ ಆರೋಪಿಯ ಮನೆಗೆ ವಾಸ ಇರಲು ಹೋದರು. 1 ನೇ ಆರೋಪಿಯು ನಂತರ 2 ನೇ ಆರೋಪಿಯ ಜೊತೆ ಸೇರಿ ನನ್ನ ಅಕ್ಕನಿಗೆ ವಿನಾ ಕಾರಣ ಹೊಡೆಯುವುದು ಮತ್ತು ಬೈಯುವುದು ಮಾಡುತ್ತಿದ್ದರು. ಬೈಯುವುದು ಮಾಡುತ್ತಿದ್ದರು. ಅವಳಿಗೆ ಮಾದಿಗ ಜಾತಿಯವಳು ಎಂದು ನಿಂದಿಸಿ, ಅವಾಚ್ಯ ಶಬ್ದಗಳಿಂದ ಬೈದು, ಸತ್ತು ಹೋಗು ಎಂದು ಪ್ರಚೋದನೆ ಮಾಡುತ್ತಿದ್ದರು. ಸದರಿ ಸಂಗತಿಯನ್ನು ನನ್ನ ಅಕ್ಕ ನನಗೆ ತಿಳಿಸಿದ್ದಳು. ನಂತರ ಚಾಸಾ 14 ಮತ್ತು 16 ರವರ ಮುಂದೆ ಪಂಚಾಯಿತಿ ಸಹ ಆಗಿತ್ತು. ಸದರಿ ಪಂಚಾಯಿತಿ ಆದ ನಂತರ ಆರೋಪಿತರು ನನ್ನ

ಅಕ್ಕಳನ್ನು ಒಂದು ವರ್ಷದ ತನಕ ಚೆನ್ನಾಗಿ ನೋಡಿ ಕೊಂಡಿದ್ದರು. 1 ನೇ ಆರೋಪಿಯು ನಂತರ ಕುಡಿಯುವ ಅಭ್ಯಾಸ ಮಾಡಿಕೊಂಡು ಮನೆಗೆ ಕುಡಿದು ಬಂದು ನನ್ನ ಅಕ್ಕನಿಗೆ ಹೊಡೆಯುವುದು ಬೈಯುವುದು ಮಾಡುತ್ತಿದ್ದ. ನನ್ನ ಅಕ್ಕನಿಗೆ ಸತ್ತು ಹೋಗು ಎಂದು ಹೇಳಿ ಆರೋಪಿತರು ಕಿರುಕುಳ ಕೊಟ್ಟಿದ್ದರು. ಆರೋಪಿತರು ನನ್ನ ಅಕ್ಕನಿಗೆ ಸತ್ತು ಹೋಗು ಎಂದು ಪ್ರೇರೇಪಣೆ ಮಾಡಿದ್ದರಿಂದ ಮತ್ತು ಅವರು ನೀಡುತ್ತಿದ್ದ ಕಿರುಕುಳದಿಂದ ನನ್ನ ಅಕ್ಕ ಆರೋಪಿತರ ಮನೆಯಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ನನ್ನ ಅಕ್ಕ ಆತ್ಮಹತ್ಯೆ ಮಾಡಿಕೊಂಡು ಸುಮಾರು 1 ವರ್ಷ ಆಗಿದೆ. ಯಾರೋ ನನಗೆ ಪೋನ್ ಮಾಡಿ ನನ್ನ ಅಕ್ಕ ವಿಷ ಕುಡಿದ ಸಂಗತಿಯನ್ನು ಹೇಳಿದ್ದಳು. ನಂತರ ನಾನು, ಚಾಸಾ 1, 11 ಮತ್ತು ಇತರರು ಸೇರಿ ನನ್ನ ಅಕ್ಕಳನ್ನು ಕೊಟ್ಟಾಲ್ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ವಿಮ್ಸ್ ಆಸ್ಪತ್ರೆಗೆ ಬಳ್ಳಾರಿಗೆ ಕರೆದುಕೊಂಡು ಬಂದಿದ್ದೆವು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ನನ್ನ ಅಕ್ಕ  ಮರಣ ಹೊಂದಿದ್ದಳು. ಆ ಸಮಯದಲ್ಲಿ ನನ್ನ ಅಕ್ಕ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆರೋಪಿತರು ನನ್ನ ಅಕ್ಕನಿಗೆ ಮಾದಿಗ ಜಾತಿಯವಳು ಎಂದು ನಿಂದಿಸಿದ್ದರಿಂದ ಮತ್ತು ಸತ್ತು ಹೋಗು ಎಂದು ಪ್ರೆರೇಪಿಸಿದ್ದರಿಂದ ನನ್ನ ಅಕ್ಕ  ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಸಾಕ್ಷಿಯು ಆರೋಪಿ 1 ಮತ್ತು 2 ರವರನ್ನು ನೋಡಿ ಗುರುತಿಸಿರುತ್ತಾರೆ. ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ.

<u>**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್ ಬಿ ಕೆ  ವಕೀಲರಿಂದಃ**</u>

ನನ್ನ ಅಕ್ಕ ಮತ್ತು 1 ನೇ ಆರೋಪಿ ಪ್ರೀತಿಸಿ ಮದುವೆಯಾಗಿದ್ದರು ಎಂದರೆ ಸರಿ. 1 ನೇ ಆರೋಪಿಯು ಒಳ್ಳೆಯವನು ಎಂದು ಹೇಳಿ ನಾವೂ ಸಹ ಮದುವೆ ಒಪ್ಪಿದ್ದೆವು ಎಂದರೆ ಸರಿ. 1 ನೇ ಆರೋಪಿಯು ಬೇರೆ ಜಾತಿಯವನು ಆಗಿದ್ದರಿಂದ ನಮಗೆ ನನ್ನ  ಅಕ್ಕಳನ್ನು 1 ನೇ ಆರೋಪಿಗೆ ಮದುವೆ ಮಾಡಿಕೊಡಲು ಇಷ್ಟ  ಇರಲ್ಲಿ ಎಂದರೆ ಸರಿ. ನನ್ನ ಅಕ್ಕನ ಮದುವೆಯ ಸಮಯದಲ್ಲಿ ನಾನು 7 ನೇ ತರಗತಿ ಓದುತ್ತಿದ್ದೇನೆ. ನನ್ನ ಅಕ್ಕನ ಮದುವೆಗಾಗಿ ನನ್ನ ತಂದೆ ಸುಮಾರು 4-5 ಲಕ್ಷ ರೂ. ಹಣವನ್ನು ಖರ್ಚು ಮಾಡಿದ್ದರು ಎಂದರೆ ಸರಿ. ಸದರಿ ಹಣವನ್ನು ವಾಪಾಸ್ಸು ಕೊಡುವಂತೆ ನಾವು 1 ನೇ  ಆರೋಪಿಯನ್ನು ಕೇಳುತ್ತಿದ್ದೆವು ಎಂದರೆ ನನಗೆ ಗೊತ್ತಿಲ್ಲ. ನಾವು ನಮ್ಮ ಅಕ್ಕನ ಮನೆಗೆ

ಹೋದಾಗ ನನ್ನ ಅಕ್ಕ ಮತ್ತು 1 ನೇ ಆರೋಪಿ ಅನ್ಯೋನ್ಯವಾಗಿ ಇದ್ದರು ಎಂದರೆ ಸರಿ. ನನ್ನ ಅಕ್ಕ ನನಗೆ ಯಾವುದೇ ವಿಷಯ ಹೇಳುತ್ತಿರಲಿಲ್ಲ ಎಂದರೆ ಸರಿ. ಪಂಚಾಯಿತಿಗೂ ಮೊದಲು ನಾವು ಆರೋಪಿತರ ವಿರುದ್ಧ ದೂರನ್ನು ಕೊಟ್ಟಿರಲಿಲ್ಲ. 2 ನೇ ಆರೋಪಿಯು ನನಗೆ ಪೋನ್ ಮಾಡಿದ ನಂತರ ನಾನೊಬ್ಬನೇ ಆರೋಪಿತರ ಮನೆಗೆ ಹೋಗಿದ್ದೆ. ಆಗ ನನ್ನ ಅಕ್ಕ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿ. ಆರೋಪಿತರು ನನ್ನ ಅಕ್ಕನಿಗೆ ಹೊಡೆ ಬಡೆ ಮಾಡಿ ಕಿರುಕುಳ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಅಕ್ಕನಿಗೆ ಜಾತಿ ಹಿಡಿದು ನಿಂದಿಸಿ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯುಲ್ಲ. ನನ್ನ ಅಕ್ಕಳು 1 ನೇ ಆರೋಪಿಯನ್ನು ಮದುವೆಯಾಗಿದ್ದು ನಮಗೆ ಇಷ್ಟ ಇಲ್ಲದೇ ಇದ್ದ ಕಾರಣ ನಾವು ಮೃತಳಿಗೆ ನಮ್ಮ ಮನೆಗೆ ಬರಬೇಡ ಎಂದು ಹೇಳಿ ಕಿರುಕುಳ ಕೊಡುತ್ತಿದ್ದರಿಂದ ನೊಂದು ನನ್ನ ಅಕ್ಕ ಆತ್ಮಹತ್ಯೆ ಮಾಡಿಕೊಂಡಿದ್ದಳು ಎಂದರೆ ಸರಿಯುಲ್ಲ. ನನ್ನ ಅಕ್ಕಳ ಸಾವಿಗೆ ಆರೋಪಿತರು ಕಾರಣರಲ್ಲದೇ ಇದ್ದರೂ ಸಹ ನಾನು ನನ್ನ ತಂದೆಯ ಮಾತನ್ನು ಕೇಳಿಕೊಂಡು ಆರೋಪಿತರು ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಕ್ಕ ನನಗೆ ಯಾವುದೇ ವಿಷಯವನ್ನು ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕನಿಗೆ ಆಗಿದ್ದ ಮಗು ಈಗ ಮರಣ ಹೊಂದಿದೆ ಎಂದರೆ ಸರಿ. 4-5 ತಿಂಗಳ ಹಿಂದೆ ಮಗು ಮರಣ ಹೊಂದಿತ್ತು. ಕಣ್ಣಿನ ಕ್ಯಾನ್ಸರ್ ನಿಂದಾಗಿ ಮಗು ಮರಣ ಹೊಂದಿತ್ತು.ನನನ ಅಕ್ಕನ ಮಗಳಿಗೆ ಅಜಬಿನ್ ಎಂದು ಮುಸ್ಲಿಂ ಹೆಸರು ಇಟ್ಟಿದ್ದರು ಎಂದರೆ ಸರಿ. ನನ್ನ ತಂದೆ ತಾಯಿ ನನ್ನ ಅಕ್ಕನಿಗೆ ಅವಳ ಮಗಳಿಗೆ ಹಿಂದೂ ಹೆಸರು ಇಡುವಂತೆ ಹೇಳುತ್ತಿದ್ದರು ಎಂದರೆ ಸರಿ . ಅದಕ್ಕೆ ನನ್ನ ಅಕ್ಕ ಒಪ್ಪಿರಲಿಲ್ಲ ಎಂದರೆ ಸರಿ. ನನ್ನ ತಂದೆ ತಾಯಿ ನನ್ನ ಅಕ್ಕನ ಮಗಳ ಹೆಸರನ್ನು ಬದಲಾಯಿಸುವಂತೆ ಹೇಳುತ್ತಿದ್ದರಿಂದ ನನ್ನ ಅಕ್ಕ ಮನ ನೊಂದಿದ್ದಳು ಎಂದರೆ ಸರಿಯುಲ್ಲ. ಆದ್ದರಿಂದ ಅವಳು ಆತ್ಮಹತ್ಯೆ ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ. ನನಗೆ ಪೋನ್ ಮಾಡಿ ವಿಷಯ ತಿಳಿಸಿದವರ ಹೆಸರು ಗೊತ್ತಿಲ್ಲ. ನನಗೆ ಯಾರೂ ಪೋನ್ ಮಾಡಿ ವಿಷಯ ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಅಕ್ಕನಿಗೆ ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಅಕ್ಕನಿಗೆ ಹೊಡೆ ಬಡೆ ಮಾಡಿ ಆತ್ಮಹತ್ಯೆಗೆ ಪ್ರಚೋದನೆ ನೀಡಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯು 1 ನೇ ಆರೋಪಿಯ ಜೊತೆ

ವಾಸ ಇಲ್ಲ ಎಂದರೆ ಸರಿ . ಅವಳು ಬೇರೆ ಮನೆಯಲ್ಲಿ ವಾಸ ಇದ್ದಳು ಎಂದರೆ ಸರಿ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾನು ನನ್ನ ತಂದೆ ತಾಯಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**